# ಯಾಜ್ಞವಲ್ಕ್ಯನ ಸಂನ್ಯಾಸ

## (ಬೃಹದಾರಣ್ಯಕೋಪನಿಷತ್ತು – ೫)

ಸ್ವಾಮಿ ವೀರೇಶಾನಂದ


**ಯಾ**ಜ್ಞವಲ್ಕ್ಯನಿಗೆ ಇಬ್ಬರು ಹೆಂಡತಿಯರು: ಮೈತ್ರೇಯಿ ಮತ್ತು ಕಾತ್ಯಾಯನಿ. ಇವರಿಬ್ಬರಲ್ಲಿ ಮೈತ್ರೇಯಿ ಬ್ರಹ್ಮವಾದಿನಿಯಾಗಿದ್ದಳು, ಅಂದರೆ ಬ್ರಹ್ಮವನ್ನು ಕುರಿತು ವಾದಮಾಡುವ ಸ್ವಭಾವವನ್ನು ಕರಗತಮಾಡಿಕೊಂಡಿದ್ದಳು. ಕಾತ್ಯಾಯನಿಯು ಸ್ತ್ರೀಪ್ರಜ್ಞೆಯನ್ನು ಹೊಂದಿದ್ದಳು. ಅಂದರೆ, ಮನೆವಾರ್ತೆಯನ್ನು ನೋಡಿಕೊಳ್ಳುವ ಪ್ರವೃತ್ತಿಯುಳ್ಳವಳಾಗಿದ್ದಳು. ಈ ಸಂದರ್ಭದಲ್ಲಿ ಯಾಜ್ಞವಲ್ಕ್ಯನು ಗೃಹಸ್ಥಧರ್ಮವನ್ನು ತ್ಯಜಿಸಿ ಪಾರಿವ್ರಾಜ್ಯ ವೃತ್ತಿ ಅಂದರೆ ಸಂನ್ಯಾಸವನ್ನು ಅಪ್ಪಿಕೊಳ್ಳಲು ಸನ್ನದ್ಧನಾದನು.

‘‘ಎಲೈ ಮೈತ್ರೇಯಿ’’ ಎಂದು ಯಾಜ್ಞವಲ್ಕ್ಯನು ತನ್ನ ಹಿರಿಯ ಹೆಂಡತಿಯನ್ನು ಕರೆದನು. ಕರೆದು ಹೀಗೆಂದನು: ‘‘ಮೈತ್ರೇಯಿ, ನಾನು ಗೃಹಸ್ಥಾಶ್ರಮವನ್ನು ತ್ಯಜಿಸಲು ನಿಶ್ಚಯಿಸಿದ್ದೇನೆ. ಸಂನ್ಯಾಸ ಆಶ್ರಮಕ್ಕೆ ನಾನು ಪ್ರವೇಶಮಾಡುತ್ತೇನೆ. ನನಗೆ ಇದಕ್ಕೆ ಅನುಮತಿಯನ್ನು ಕೊಡು. ನೀನು ಇಚ್ಛಿಸುವುದಾದರೆ, ನಿನಗೂ ಕಾತ್ಯಾಯನಿಗೂ ನಾನು ನನ್ನಲ್ಲಿರುವ ಸಂಪತ್ತನ್ನು ಭಾಗಮಾಡಿಕೊಡುತ್ತೇನೆ.’’

ಆಗ ಮೈತ್ರೇಯಿ ಹೇಳುತ್ತಾಳೆ: ‘‘ಭಗವಂತನೇ, ಇಡೀ ಭೂಮಿಯೇ ತುಂಬುವಷ್ಟು ಧನ ನನ್ನದಾದರೂ ಕೂಡ, ಅದರಿಂದ ನನಗೆ ಅಮೃತತ್ವ ಸಿಕ್ಕುವುದೇನು?’’ ಇದಕ್ಕೆ ಯಾಜ್ಞವಲ್ಕ್ಯನು ಉತ್ತರಿಸಿದನು: ‘‘ಇಲ್ಲ, ಮೈತ್ರೇಯಿ.’’

ಆಗ ಮೈತ್ರೇಯಿ ಹೇಳುತ್ತಾಳೆ: ‘‘ಯಾವುದರಿಂದ ನಾನು ಅಮೃತತ್ತ್ವವನ್ನು ಪಡೆದುಕೊಳ್ಳಲು ಸಾಧ್ಯವಿಲ್ಲವೋ ಅಂಥ ಧನದಿಂದಾಗಲಿ, ಸಂಪತ್ತಿನಿಂದಾಗಲಿ ಏನು ತಾನೇ ಪ್ರಯೋಜನ? ಭಗವಂತನೇ, ನೀನು ಯಾವುದನ್ನು ತಿಳಿದುಕೊಂಡಿರುವೆಯೋ ನನಗೆ ಅದನ್ನೇ ದಯವಿಟ್ಟು ಹೇಳು.’’

ಆಗ ಯಾಜ್ಞವಲ್ಕ್ಯನು ಹೇಳುತ್ತಾನೆ: ‘‘ಪ್ರಿಯಳಾದ ಮೈತ್ರೇಯಿ, ಒಳ್ಳೆಯದು ಹಾಗಾದರೆ. ನಿನಗೆ ಅದನ್ನು ನಾನು ವಿವರಿಸುತ್ತೇನೆ. ನಾನು ವಿವರಿಸಿದ್ದನ್ನು ಏಕಾಗ್ರತೆಯಿಂದ ಕೇಳು.’’ ಯಾಜ್ಞವಲ್ಕ್ಯನು ಉಪದೇಶ ಮಾಡಲು ಆರಂಭಿಸಿದನು:



‘‘ಒಬ್ಬ ಹೆಂಡತಿಗೆ ಗಂಡನು ಏಕೆತಾನೇ ಪ್ರಿಯನಾಗಿರುತ್ತಾನೆ? ಗಂಡನ ಪ್ರೀತಿಗಾಗಿ ಅವಳಿಗೆ ಗಂಡನು ಪ್ರಿಯನಾಗಿರುವುದಿಲ್ಲ. ತನ್ನ ಸಲುವಾಗಿಯೇ ಒಬ್ಬ ಹೆಂಡತಿಗೆ ಗಂಡನು ಪ್ರಿಯನಾಗಿರುತ್ತಾನೆ. ಇದೇ ರೀತಿ ಒಬ್ಬ ಗಂಡನು ಕೂಡ. ಅವನೂ ಕೂಡ ತನ್ನ ಹೆಂಡತಿಯನ್ನು ತನ್ನ ಸಲುವಾಗಿಯೇ ಪ್ರೀತಿಸುತ್ತಾನೆ. ಇದೇ ರೀತಿ ಒಬ್ಬನಿಗೆ ಮಕ್ಕಳಾಗಲಿ, ವಿತ್ತವಾಗಲಿ, ಪಶುಗಳಾಗಲಿ, ಬ್ರಾಹ್ಮಣ, ಕ್ಷತ್ರಿಯ, ಲೋಕಗಳು, ದೇವತೆಗಳು, ವೇದಗಳು, ಪಂಚಭೂತಗಳು — ಇವೆಲ್ಲವೂ ಕೂಡ ಪ್ರಿಯವಾಗಿರುವುದು ಅವುಗಳಿಗೋಸ್ಕರವಾಗಿ ಅಲ್ಲ. ಅವುಗಳೆಲ್ಲವೂ ಪ್ರಿಯವಾಗಿರು ವುದು ತನಗೋಸ್ಕರಕ್ಕಾಗಿಯೇ. ಆದ್ದರಿಂದ, ಮೈತ್ರೇಯಿ, ಆತ್ಮ ನನ್ನೇ ಕಂಡುಕೊಳ್ಳಬೇಕು; ಆತ್ಮನನ್ನು ಶ್ರವಣಮಾಡಬೇಕು; ಮನನ ಮಾಡಬೇಕು; ಧ್ಯಾನಮಾಡಬೇಕು. ಮೈತ್ರೇಯಿ, ಆತ್ಮ ನನ್ನು ಕಂಡುಕೊಂಡರೆ, ಶ್ರವಣ ಮಾಡಿದರೆ ಮಾತ್ರವೇ – **ಸರ್ವಂ ವಿದಿತಂ** : ಎಲ್ಲವೂ ತಿಳಿದುಬರುತ್ತದೆ.

‘‘ಬ್ರಾಹ್ಮಣನು ಆತ್ಮವೇ ಆಗಿದ್ದಾನೆ. ಆತ್ಮಕ್ಕಿಂತ ಬೇರೆ ಬ್ರಾಹ್ಮಣನಿಲ್ಲ. ಹಾಗೆಂದುಕೊಂಡರೆ, ಬ್ರಹ್ಮವು ಅವನನ್ನು ಹೊರದೂಡುವಂತೆ ಇರುತ್ತದೆ. ಇದರಂತೆ ಕ್ಷತ್ರಿಯನು ಕೂಡ. ಕ್ಷತ್ರಿಯನೆಂದರೆ ಅದು ಆತ್ಮವೇ ಆಗಿದೆ. ಅದೇ ರೀತಿ ಲೋಕಗಳು, ದೇವತೆಗಳು,

ವೇದಗಳು, ಜೀವಜಂತುಗಳು ಕೂಡ. ಇವುಗಳು ಮಾತ್ರವಲ್ಲ ಈ ಜಗತ್ತಿನಲ್ಲಿ ಇರುವುದೆಲ್ಲವೂ ಆತ್ಮನಿಗಿಂತ ಬೇರೆಯಲ್ಲ. ಅದು ಬೇರೆ ಎಂದು ಯಾರು ತಿಳಿದುಕೊಳ್ಳುತ್ತಾರೋ ಅಂಥವರಿಗೆ ಆಯಾ ವಸ್ತುಗಳ ಸರಿಯಾದ ಪರಿಜ್ಞಾನ ಆಗುವುದಿಲ್ಲ. ಏಕೆಂದರೆ ಆತ್ಮನಿಗಿಂತ ಬೇರೆ ವಸ್ತುವೇ ಇಲ್ಲ. ಎಲ್ಲ ವಸ್ತುಗಳ ಅಂತಸ್ಸಾರವು ಆತ್ಮವೇ ಆಗಿದೆ. ಒಟ್ಟಾರೆ ಹೇಳುವುದಾದರೆ ಬ್ರಾಹ್ಮಣ, ಕ್ಷತ್ರಿಯರು, ಲೋಕಗಳು, ದೇವತೆಗಳು, ವೇದಗಳು, ಜೀವಜಂತುಗಳು – ಸರ್ವಸ್ವವೂ ಆತ್ಮವೇ ಆಗಿದೆ.''

ಆತ್ಮಕ್ಕೆ ವ್ಯತಿರಿಕ್ತವಾಗಿ ಕಾಣುವುದೇ ಬಂಧನಕ್ಕೆ ಕಾರಣ; ದುಃಖಕ್ಕೆ ಕಾರಣ. ಹಾಗಾದರೆ ಇದೆಲ್ಲವೂ ಆತ್ಮವೇ ಎಂದು ತಿಳಿದುಕೊಳ್ಳುವುದು ಹೇಗೆ? ಅದಕ್ಕೆ ಹಲವಾರು ಉದಾಹರಣೆಗಳನ್ನು ಯಾಜ್ಞವಲ್ಕ್ಯನು ನೀಡುತ್ತಾನೆ: ''ಹಲವಾರು ಜನರು ನಗಾರಿಗಳನ್ನು ಬಾರಿಸುತ್ತಿದ್ದಾರೆ ಎಂದುಕೊಳ್ಳೋಣ. ನಮಗೆ ಒಟ್ಟಾರೆ ನಗಾರಿಗಳ ಸಾಮಾನ್ಯ ಶಬ್ದವು ಕೇಳಿಬರುತ್ತದೆಯೇ ಹೊರತು, ಬೇರೆ ಬೇರೆ ನಗಾರಿಗಳ ಶಬ್ದಗಳು ಬೇರೆಬೇರೆಯಾಗಿ ಕೇಳಿಬರುವುದಿಲ್ಲ. ಹಾಗೆಯೇ ಜಗತ್ತಿನಲ್ಲಿ ಕಾಣಬರುವ ವಿಶೇಷಗಳನ್ನು ಪರಿಗಣಿಸದೆಯೇ ನೋಡಿದಾಗ, ಅವೆಲ್ಲದರ ಸಾಮಾನ್ಯ ಸ್ವರೂಪವು ಬ್ರಹ್ಮವೇ ಎಂದು ಗೊತ್ತಾಗುತ್ತದೆ. ಅದೇ ರೀತಿ ಶಂಖನಾದದಲ್ಲಿಯೂ ಕೂಡ; ವೀಣೆಗಳ ಶಬ್ದದಲ್ಲಿಯೂ ಕೂಡ.

''ಇಷ್ಟೆಲ್ಲ ದೃಷ್ಟಾಂತಗಳನ್ನು ತೆಗೆದುಕೊಂಡಿರುವುದಾದರೂ ಏಕೆ? ಜಗತ್ತಿನಲ್ಲಿ ಇರುವ ಚೇತನ-ಅಚೇತನ ರೂಪಗಳಲ್ಲಿ ಇರುವ ಅನೇಕ ರೀತಿಯ ಭೇದಗಳೆಲ್ಲವೂ ಅವೆಲ್ಲದರ ಏಕರೂಪವಾದ ಆತ್ಮಸ್ವರೂಪದಲ್ಲಿಯೇ ಮಿಲಿತವಾಗಿರುತ್ತವೆ. ಹೀಗಾಗಿ ಅಂಥ ಸತ್ಯತತ್ತ್ವವಾದ ಆತ್ಮಸ್ವರೂಪವನ್ನೇ ಕಂಡುಕೊಳ್ಳಬೇಕು. ನಗಾರಿ, ಶಂಖ, ವೀಣೆ — ಇವುಗಳೆಲ್ಲದರ ಶಬ್ದವಿಶೇಷಗಳು ಒಂದೇ ಶಬ್ದ ಸಾಮಾನ್ಯದಲ್ಲಿ ಮಿಲಿತವಾಗುತ್ತವೆ. ಇದೇ ರೀತಿ, ಜಗತ್ತಿನ ಎಲ್ಲ ಭೇದವಿಶೇಷಗಳು ಪ್ರಜ್ಞಾನಘನವಾದ ಏಕಚೈತನ್ಯ ಸ್ವರೂಪದಲ್ಲಿ ಮಿಲಿತವಾಗಿರುತ್ತವೆ. ಆದ್ದರಿಂದ ಆತ್ಮವೊಂದನ್ನೇ ನೋಡಬೇಕು; ಆತ್ಮವೊಂದನ್ನೇ ಕೇಳಬೇಕು.''

ಯಾಜ್ಞವಲ್ಕ್ಯನು ಮುಂದುವರೆದು ಮತ್ತೆ ಹೇಳುತ್ತಾನೆ: ''ಮೈತ್ರೇಯಿ, ಉತ್ಪತ್ತಿಕಾಲದಲ್ಲಿ ಎಲ್ಲವೂ ಬ್ರಹ್ಮವೇ ಆಗಿತ್ತು. ಬೆಂಕಿಯಿಂದ ಕಿಡಿಗಳು, ಹೊಗೆ, ಕೆಂಡಗಳು — ಹೀಗೆ ವಿಂಗಡವಾಗಿ ಹೊರಬರುತ್ತವೆ. ಇದಕ್ಕಿಂತ ಮುಂಚೆ ಎಲ್ಲವೂ ಬೆಂಕಿಯೇ ಆಗಿರುತ್ತದೆ. ಅಲ್ಲಿ ಭೇದಗಳು ಇರುವುದಿಲ್ಲ. ಅದೇರೀತಿ, ನಾಮರೂಪಗಳಾಗಿ ವಿಂಗಡಿಸಿಕೊಳ್ಳುವ ಮೊದಲು, ಎಲ್ಲವೂ ಪ್ರಜ್ಞಾನಘನವೇ ಆಗಿತ್ತು. ಇದಕ್ಕೆ ಇನ್ನೊಂದು ಉದಾಹರಣೆಯನ್ನು ಕೊಡಬಹುದು. ಹಸಿಯಾದ ಕಟ್ಟಿಗೆಗಳಿಂದ ಬೆಂಕಿಯನ್ನು ಹೊತ್ತಿಸಲಾಗಿದೆ ಎಂದುಕೊಳ್ಳೋಣ. ಅದು ಹೊತ್ತಿಕೊಂಡಾಗ, ಬೇರೆಬೇರೆಯಾಗಿ ಹೊಗೆಗಳು ಆ ಬೆಂಕಿಯಿಂದ ಹೊರಹೊಮ್ಮುತ್ತವೆ. ಇಂಥ ಹೊಗೆಗಳು ಬೆಂಕಿಯ ವಿವಿಧ ಕಡೆಗಳಿಂದ ಹೊರಹೊಮ್ಮುತ್ತವೆ. ಹಾಗೆಯೇ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ, ಇತಿಹಾಸ, ಪುರಾಣ, ವಿದ್ಯೆ, ಉಪನಿಷತ್ತುಗಳು, ಶ್ಲೋಕಗಳು, ಸೂತ್ರಗಳು, ಅನುವ್ಯಾಖ್ಯಾನಗಳು, ವ್ಯಾಖ್ಯಾನಗಳು — ಇವೆಲ್ಲವೂ ಪರಮಾತ್ಮನ ಉಸಿರುಗಳೇ ಆಗಿವೆ.

''ಇನ್ನು ಪ್ರಲಯಕಾಲದಲ್ಲಿ ಇವೆಲ್ಲವೂ ಎಲ್ಲಿ ಹೋಗಿ ಸೇರುತ್ತವೆ? ಅವೆಲ್ಲವೂ ಬ್ರಹ್ಮದಲ್ಲಿಯೇ ಹೋಗಿಸೇರುತ್ತವೆ. ಇದು ಹೇಗೆ ಎಂದರೆ ಎಲ್ಲ ನೀರುಗಳಿಗೂ ಸಮುದ್ರವೊಂದೇ ಆಶ್ರಯವಾಗಿರುತ್ತದೆ. ಸ್ಪರ್ಶದ ಎಲ್ಲ ಅನುಭವಗಳಿಗೂ ಚರ್ಮವೊಂದೇ ಆಶ್ರಯವಾಗಿರುತ್ತದೆ. ಎಲ್ಲ ವಾಸನೆಗಳಿಗೂ ಮೂಗು ಒಂದೇ ಆಶ್ರಯವಾಗಿದೆ. ಎಲ್ಲ ರಸಗಳಿಗೂ ನಾಲಗೆಯೊಂದೇ ಆಶ್ರಯವಾಗಿದೆ. ಎಲ್ಲ ಶಬ್ದಗಳಿಗೂ ಶ್ರೋತ್ರೇಂದ್ರಿಯವೊಂದೇ ಆಶ್ರಯವಾಗಿದೆ. ಹಾಗೆಯೇ ಎಲ್ಲ ರೀತಿಯ ಆಲೋಚನೆಗಳಿಗೆ ಆಶ್ರಯವಾಗಿರುವುದು ಮನಸ್ಸು. ಎಲ್ಲ ಕರ್ಮಗಳಿಗೂ ಆಶ್ರಯವಾಗಿರುವುದು ಎರಡು ಕೈಗಳು. ಎಲ್ಲ ರೀತಿಯ ನಡಿಗೆಗಳಿಗೆ ಕಾಲುಗಳೇ ಆಶ್ರಯ. ಹಾಗೆಯೇ ಎಲ್ಲ ವೇದಗಳಿಗೂ ವಾಕ್ ಅಥವಾ ಮಾತು ಒಂದೇ ಆಶ್ರಯ. ಹಾಗೆಯೇ ಆತ್ಮತತ್ತ್ವವು ಎಲ್ಲದಕ್ಕೂ ಆಶ್ರಯವಾಗಿದೆ.

''ಎಲ್ಲವೂ ಆತ್ಮವಸ್ತುವಿನಲ್ಲಿಯೇ ಮಿಲಿತವಾಗುತ್ತದೆ. ಇದು ಹೇಗೆ ಎಂದರೆ, ಉಪ್ಪಿನ ಹರಳೊಂದನ್ನು ನೀರಿನಲ್ಲಿ ಹಾಕಿದಾಗ ಅದು ನೀರನ್ನೇ ಅನುಸರಿಸಿ, ಕರಗಿಹೋಗುತ್ತದೆ. ಕರಗಿಹೋದ ಉಪ್ಪಿನ ಹರಳನ್ನು ತೆಗೆದು ನೋಡುವುದಕ್ಕೆ ಆಗುವುದಿಲ್ಲ. ಆದರೂ, ಅಂಥ ನೀರಿನಿಂದ ಎಲ್ಲಿ ತೆಗೆದುಕೊಂಡು ಸೇವಿಸಿದರೂ, ಅದು ಉಪ್ಪೇ ಆಗಿರುತ್ತದೆ. ಹೀಗೆಯೇ, ಎಲ್ಲಕ್ಕಿಂತ ಹೆಚ್ಚಿನದಾದ, ಅನಂತವೂ ಅಪಾರವೂ ಆದ ವಿಜ್ಞಾನಘನ ಅಂದರೆ, ಚೈತನ್ಯಘನವೇ ಎಲ್ಲೆಲ್ಲಿಯೂ ಇರುವುದು. ಜೀವರಾಶಿಗಳನ್ನು ಅದು ಅನುಸರಿಸಿಕೊಂಡಂತೆ ಕಾಣುವುದು. ಅದು ಹೊರಟುಹೋದರೆ, ಜೀವಿಯಲ್ಲಿ ಅರಿವು ಎನ್ನುವುದೇ ಇರುವುದಿಲ್ಲ. ಆದರೆ ಆತ್ಮವೇ ಇಲ್ಲ ಎಂದು ಹೇಳುವುದಕ್ಕೆ ಆಗುವುದಿಲ್ಲ. ಹೀಗೆ ಆತ್ಮ ಎಲ್ಲ ಕಡೆ ಇದ್ದರೂ ನಮಗೆ ಇದೆ ಎನ್ನುವುದು ಗೊತ್ತಾಗುವುದೇ ಇಲ್ಲ.''

ಆಗ ಮೈತ್ರೇಯಿ ತನ್ನ ಸಂದೇಹವನ್ನು ವ್ಯಕ್ತಪಡಿಸುತ್ತಾಳೆ: ''ಬ್ರಹ್ಮವಸ್ತುವಿನಲ್ಲಿಯೇ ಎರಡು ವಿರುದ್ಧಧರ್ಮಗಳಿವೆ ಎಂದು ನೀವು ಹೇಳಿದ ಹಾಗಾಯಿತು. ಈ ರೀತಿಯ ಉಪದೇಶದಿಂದ ನನ್ನನ್ನು ಮೋಹಗೊಳಿಸುತ್ತಿರುವಿರಿ. ಮೊದಲು ಆತ್ಮನು ಚೈತನ್ಯಘನವೇ ಎಂದು ಹೇಳುತ್ತೀರಿ. ತದನಂತರ, ದೇಹದಿಂದ ಹೊರಟುಹೋದಾಗ ಅದರ ಅರಿವು ಉಂಟಾಗುವುದಿಲ್ಲ ಎನ್ನುತ್ತೀರಿ. ಇದು ಹೇಗೆ?'' ಎಂದು ಕೇಳುತ್ತಾಳೆ. ಆಗ ಯಾಜ್ಞವಲ್ಕ್ಯನು


ಹೇಳುತ್ತಾನೆ: ''ಎಲೆ ಮೈತ್ರೇಯಿ, ನಾನು ಮೋಹಗೊಳಿಸುವ ವಾಕ್ಯವನ್ನೇನೂ ಹೇಳುತ್ತಿಲ್ಲ. ಬ್ರಹ್ಮವೆಂಬ ಒಂದೇ ವಸ್ತುವಿನಲ್ಲಿ ಎರಡು ಗುಣಗಳೂ ಇರುತ್ತವೆ ಎಂದೇನೂ ನಾನು ಹೇಳುತ್ತಿಲ್ಲ. ಹಾಗೆ ಎರಡು ಧರ್ಮಗಳಿವೆ ಎಂದು ನೀನು ತಿಳಿದುಕೊಂಡಿರುವುದು ಭ್ರಾಂತಿಮಾತ್ರದಿಂದ. ಈ ಭ್ರಾಂತಿಗೆ ಕಾರಣ ಅವಿದ್ಯೆಯೇ ಹೊರತು ಬೇರಲ್ಲ. ಅವಿದ್ಯೆಯ ಕಾರಣದಿಂದಲೇ ಶರೀರದಲ್ಲಿ ನಾನು ಬೇರೆ ಎಂಬ ಭ್ರಾಂತಿಜ್ಞಾನ ಉಂಟಾಗುತ್ತದೆ. ಶರೀರದಲ್ಲಿನ ತಾದಾತ್ಮ್ಯಭಾವನೆ ಹೊರಟುಹೋದರೆ, ಭೇದಬುದ್ಧಿಯೂ ಹೊರಟುಹೋಗುತ್ತದೆ. ಶರೀರದಲ್ಲಿ ಉಂಟಾಗಿದ್ದ ಆತ್ಮನ ಉಪಾಧಿರೂಪಕ್ಕೆ ನಾಶವೇ ಹೊರತು, ಆತ್ಮನಿಗೆ ನಾಶವಿಲ್ಲ. ಅದನ್ನೇ ನಾನು ವಿಜ್ಞಾನಘನ ಎಂದು ಹೇಳಿರುವುದು. ಆದ್ದರಿಂದ ನಾನು ವಿವರಿಸಿರುವುದಷ್ಟೇ ತಿಳಿದುಕೊಳ್ಳುವುದಕ್ಕೆ ಸಾಕಾಗುತ್ತದೆ.

''ಮೈತ್ರೇಯಿ, ಅಲ್ಲಿ ಅರಿವು ಇರುವುದಿಲ್ಲ ಎಂದೆನಷ್ಟೇ. ಅದಕ್ಕೆ ವಿವರಣೆಯನ್ನು ಹೇಳುತ್ತೇನೆ, ಕೇಳು. ಎಲ್ಲಿ ದ್ವೈತಭಾವನೆ ಇದೆಯೋ, ಅಲ್ಲಿ ಎರಡನೆಯದು ಇರುವಂತೆ ತೋರುತ್ತದೆ. ಅಲ್ಲಿ ಒಬ್ಬನು ಇನ್ನೊಂದನ್ನು ಮೂಸುತ್ತಾನೆ; ಒಬ್ಬನು ಇನ್ನೊಂದನ್ನು ಕಾಣುತ್ತಾನೆ; ಒಬ್ಬನು ಇನ್ನೊಂದನ್ನು ಕೇಳುತ್ತಾನೆ; ಒಬ್ಬನು ಇನ್ನೊಂದನ್ನು ಆಲೋಚಿಸುತ್ತಾನೆ; ಒಬ್ಬನು ಇನ್ನೊಂದನ್ನು ಅರಿತುಕೊಳ್ಳುತ್ತಾನೆ – **ಅಸ್ಯ ಸರ್ವಮ್ ಆತ್ಮೈವ ಅಭೂತ್** ಯಾವ ಸ್ಥಿತಿಯಲ್ಲಿ ಒಬ್ಬನಿಗೆ ಎಲ್ಲವೂ ಆತ್ಮವೇ ಆಗಿಬಿಡುವುದೋ, ಅಲ್ಲಿ ಯಾವುದರಿಂದ ತಾನೇ ಅವನು ಏನನ್ನು ತಾನೇ ಮೂಸಿಯಾನು? ನೋಡಿಯಾನು? ಕೇಳಿಯಾನು? ಹೇಳಿಯಾನು? ಆಲೋಚಿಸಿಯಾನು? ಅರಿತುಕೊಂಡಾನು?

''ಮೈತ್ರೇಯಿ, ಇಲ್ಲಿ ಒಂದು ರಹಸ್ಯವನ್ನು ಹೇಳುತ್ತೇನೆ. ಯಾವುದರಿಂದ ಮೇಲಿನೆಲ್ಲವನ್ನೂ ಒಬ್ಬ ಮನುಷ್ಯನು ಅರಿತುಕೊಳ್ಳುವನೋ, ಅಂಥ ಜ್ಞಾತೃವನ್ನು ಅವನು ಯಾವ ಸಾಧನದಿಂದ ತಾನೇ ತಿಳಿದುಕೊಳ್ಳಲು ಸಾಧ್ಯ? **ವಿಜ್ಞಾತಾರಮ್ ಅರೇ ಕೇನ ವಿಜಾನೀಯಾತ್** ಮೈತ್ರೇಯಿ, ನೀನೇ ಹೇಳು: ವಿಜ್ಞಾತೃವನ್ನು ಯಾವುದರಿಂದ ತಾನೇ ಒಬ್ಬನು ಅರಿತುಕೊಳ್ಳಲು ಸಾಧ್ಯ?''

ಶ್ರೀಶಂಕರಾಚಾರ್ಯರು ಈ ಗಹನವಾದ ವಿಷಯವನ್ನು ಹೀಗೆ ವಿವರಿಸುತ್ತಾರೆ: ''ಅವಿದ್ಯೆಯ ಸ್ಥಿತಿಯಲ್ಲಿ ಎಲ್ಲ ವ್ಯವಹಾರಗಳೂ ಸಾಧ್ಯ. ಆದರೆ ವಿದ್ಯೆಯಲ್ಲಿ ಎಲ್ಲವೂ ಆತ್ಮವೇ ಆಗಿರುತ್ತದೆ. ಹೀಗಾಗಿ ಭೇದವ್ಯವಹಾರ ಇರುವುದಿಲ್ಲ. ಚೈತನ್ಯಸ್ವರೂಪನಾದ ಆತ್ಮನೇ ಎಲ್ಲವನ್ನೂ ತಿಳಿಯುವ ಪ್ರಮಾತೃವಾಗಿರುತ್ತಾನೆ. ಜೀವನ್ಮುಕ್ತನಾದವನು ತನ್ನ ದೃಷ್ಟಿಯಿಂದ ಅದ್ವಿತೀಯ ಪರಮಾತ್ಮನೇ ಆಗಿರುತ್ತಾನೆ. ಹೀಗಾಗಿ ತಿಳಿದುಕೊಳ್ಳುವವನ (ವಿಜ್ಞಾತೃ) ಅರಿವಿಗೆ ತಿಳಿದುಕೊಳ್ಳುವುದೆಲ್ಲವೂ (ವಿಜ್ಞೇಯ) ವಿಷಯವಾಗಿರುತ್ತದೆ. ಆದರೆ ತಿಳಿದುಕೊಳ್ಳುವವನು ಮಾತ್ರ ಯಾವತ್ತೂ ತಿಳಿದುಕೊಳ್ಳುವ ವಿಷಯವಸ್ತುವಾಗಲು ಅಸಾಧ್ಯ. ಅಂದರೆ, ಆತ್ಮನನ್ನು ವಿಷಯೀಕರಿಸಿಕೊಳ್ಳಲು ಆಗುವುದೇ ಇಲ್ಲ. ಇದಕ್ಕೆ ಕಾರಣವೇನು? ತಿಳಿದುಕೊಳ್ಳುವುದಕ್ಕೆ ಬೇಕಾದ ಯಾವ ಕರಣಗಳೂ ಈ ಮುಕ್ತನ ಸ್ಥಿತಿಯಲ್ಲಿ ಇರುವುದಿಲ್ಲ. ಆದ್ದರಿಂದ, ಆ ಸ್ಥಿತಿಯಲ್ಲಿ ಯಾವುದರಿಂದ ಯಾವುದನ್ನು ತಾನೇ ಅರಿತುಕೊಳ್ಳುವುದಕ್ಕೆ ಸಾಧ್ಯ? ಹೀಗಾಗಿ ಈ ಎಲ್ಲವೂ ವಿಜ್ಞಾನಘನಸ್ವರೂಪನಾದ

## ಯುವಚೇತನ



## ಗುರು – ಶಿಷ್ಯ

ಜಿಜ್ಞಾಸುವಿನ ಕಣ್ಣು ತೆರೆಯುವಂತೆ ಮಾಡುವವನೇ ಗುರು. ಗುರು ಶಿಷ್ಯರ ಸಂಬಂಧ ಪೂರ್ವಿಕರಿಗೂ ಅವರ ವಂಶಜರಿಗೂ ಇರುವ ಸಂಬಂಧದಂತೆ. ಗುರುವಿನ ಮೇಲೆ ಶ್ರದ್ಧೆ, ಭಕ್ತಿ, ದೈನ್ಯ, ಗೌರವಗಳಿಲ್ಲದೆ ಇದ್ದರೆ ಯಾವ ಆಧ್ಯಾತ್ಮಿ ವಿಕಾಸವೂ ಶಿಷ್ಯನಲ್ಲಿ ಆಗುವುದಿಲ್ಲ. ಎಲ್ಲಿ ಗುರು ಶಿಷ್ಯರಲ್ಲಿ ಇಂತಹ ಸಂಬಂಧವಿದೆಯೋ ಅಲ್ಲಿ ಮಾತ್ರ ಪ್ರಚಂಡ ಆಧ್ಯಾತ್ಮಿಕ ಜೀವಿಗಳು ವಿಕಾಸವಾಗುವರು. ಯಾವ ದೇಶದಲ್ಲಿ ಇಂಥ ಪವಿತ್ರ ಸಂಬಂಧವನ್ನು ರಕ್ಷಿಸುವುದನ್ನು ಮರೆತಿರುವರೋ ಅಲ್ಲಿ ಗುರು ಕೇವಲ ಉಪನ್ಯಾಸಕನಾಗಿರುವನು. ಗುರು ತನ್ನ ಬೋಧನೆಗೆ ಐದು ಡಾಲರನ್ನು ನಿರೀಕ್ಷಿಸುವನು, ಶಿಷ್ಯನು ಗುರುವಿ ನಿಂದ ಉದುರುವ ಕೆಲವು ವಿಷಯಗಳನ್ನು ಸಂಗ್ರಹಿಸುವುದರಲ್ಲಿ ನಿರತನಾಗಿರುವನು. ಇದಾದ ಮೇಲೆ ಇಬ್ಬರೂ ತಮ್ಮ ತಮ್ಮ ದಾರಿಯನ್ನು ಹಿಡಿದುಕೊಂಡು ಹೋಗುವರು. ಇಂತಹ ಸ್ಥಿತಿಯಲ್ಲಿ ಆಧ್ಯಾತ್ಮಿಕತೆ ಲವಲೇಶ ವಾದರೂ ಇರುವುದು ಅಪರೂಪ. ಅದನ್ನು ಅನುಗ್ರಹಿಸುವವನೂ ಇರುವುದಿಲ್ಲ, ಅದನ್ನು ಸ್ವೀಕರಿಸುವುದಕ್ಕೂ ಯಾರೂ ಇರುವುದಿಲ್ಲ. ಇಂತಹ ಜನರಿಗೆ ಧರ್ಮ ಒಂದು ವ್ಯಾಪಾರವಾಗುವುದು. ಹಣ ಕೊಟ್ಟು ಇದನ್ನು ಪಡೆಯಬಹುದು ಎಂದು ಅವರು ಭಾವಿಸುವರು. ಆಧ್ಯಾತ್ಮಿಕತೆಯನ್ನು ಅಷ್ಟು ಸುಲಭವಾಗಿ ಪಡೆಯುವುದು ಸಾಧ್ಯವಾಗಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು! ಆದರೆ ದುರ್ದೈವವಶದಿಂದ ಅದು ಹಾಗೆ ಆಗಲಾರದು.

ನಿಮ್ಮ ಹೃದಯವು ಸ್ವೀಕರಿಸುವುದಕ್ಕೆ ಅಣಿಯಾಗಿದ್ದು, ಗುರು ಬರುವವರೆಗೆ ಅದು ನಿಮಗೆ ದೊರಕಲಾರದು. ದೇವರಿಂದ ಕಳಿಸಲ್ಪಟ್ಟ ಗುರು ಬಂದಾಗ ಮಗುವಿನಂತೆ ಸರಳ ಶ್ರದ್ಧೆಯಿಂದ ಅವನನ್ನು ಸೇವಿಸಿ, ಅವನ ಪ್ರಭಾವಕ್ಕೆ ನಿಮ್ಮ ಹೃದಯವನ್ನೆಲ್ಲ ಸಮರ್ಪಿಸಿ. ಅವನಲ್ಲಿ ಭಗವಂತ ಆವಿರ್ಭವಿಸಿರುವುದನ್ನು ನೋಡಿ. ಯಾರು ಹೀಗೆ ಪ್ರೀತಿ ಮತ್ತು ಗೌರವದಿಂದ ಪ್ರೇರಿತರಾಗಿ ಸತ್ಯವನ್ನು ಅರಸಲು ಬರುವರೋ ಅವರಿಗೆ ಮಾತ್ರ ಸತ್ಯಸ್ವರೂಪಿಯಾದ ನಾರಾಯಣನು ಸತ್ಯ, ಶಿವ ಸೌಂದರ್ಯಗಳ ಅತಿ ಅದ್ಭುತ ವಿಷಯಗಳನ್ನು ಅರ್ಥವಾಗುವಂತೆ ಮಾಡುವನು.

*(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂಪುಟ ೧, ಪುಟ ೨೦೫)*